**ಕರ್ನಾಟಕ ಸರ್ಕಾರ**

**ಅರಣ್ಯ ಇಲಾಖೆ**

ಸುಲ್ತಾನ್ ಷರೀಫ್ ವೃತ್ತ, ಸತ್ಯಮಂಗಲ ರಸ್ತೆ,
ಚಾಮರಾಜನಗರ-571313
ದೂರವಾಣಿ : ಕಛೇರಿ : 08226-226229
ಇ-ಮೇಲ್ : chncirccf@gmail.com

# ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ (ಪ್ರಾದೇಶಿಕ), ಚಾಮರಾಜನಗರ

ಸಂಖ್ಯೆ: ಸಿ1/ಲ್ಯಾಂಡ್/ಎಫ್.ಸಿ.ಪ್ರಕರಣ/2019-20 ದಿನಾಂಕ: 20-01-2021.

ಇವರಿಗೆ,

**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,**
(ಅರಣ್ಯ ಸಂರಕ್ಷಣೆ), ಅರಣ್ಯ ಭವನ,
ಮಲ್ಲೇಶ್ವರಂ, **ಬೆಂಗಳೂರು.**

ಮಾನ್ಯರೇ,

ವಿಷಯ: ಬಿಳಿಗಿರಿರಂಗನ ಬೆಟ್ಟದ ವಿಶ್ವಶಾಂತಿ ನಿಕೇತನ ಆಶ್ರಮಕ್ಕೆ ಸರ್ಕಾರದವರು ನೀಡಿದ್ದ ಒಂದು ಎಕರೆ ಅರಣ್ಯ ಪ್ರದೇಶವನ್ನು ಆಶ್ರಮದ ಹೆಸರಿಗೆ ಅಧಿಕೃತವಾಗಿ ವರ್ಗಾವಣೆ ಮಾಡಿಕೊಡುವ ಪ್ರಸ್ತಾವೆಯನ್ನು ತಿರಸ್ಕರಿಸುವ ಬಗ್ಗೆ.

ಉಲ್ಲೇಖ: ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ಇವರ ಕಛೇರಿ ಪತ್ರ ಸಂಖ್ಯೆ: ಡಿಎಂಎನ್/ ಬಿ.ಆರ್.ಹಿಲ್ಸ್/ವಿಶ್ವಶಾಂತಿ ನಿಕೇತನ/2020-21 ದಿನಾಂಕ: 02.12.2020.

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಪತ್ರದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ಇವರು ಈ ಕಛೇರಿಗೆ ವರದಿ ಮಾಡುತ್ತಾ, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಬಿಳಿಗಿರಿರಂಗನ ಬೆಟ್ಟದಲ್ಲಿರುವ ವಿಶ್ವಶಾಂತಿ ನಿಕೇತನ ಆಶ್ರಮಕ್ಕೆ ಈ ಹಿಂದೆ ಸರ್ಕಾರದವರು ನೀಡಿದ್ದ ಒಂದು ಎಕರೆ ಅರಣ್ಯ ಪ್ರದೇಶವನ್ನು ಆಶ್ರಮದ ಹೆಸರಿಗೆ ಅಧಿಕೃತವಾಗಿ ವರ್ಗಾವಣೆ ಮಾಡಿಕೊಡುವ ಸಂಬಂಧ ಎಫ್.ಸಿ ಅನ್ ಲೈನ್ ಪ್ರಸ್ತಾವನೆ ಸಂಖ್ಯೆ: FP/KA/Others/19387/2016 ರ ಮುಖಾಂತರ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಷೇತ್ರ ತಪಾಸಣೆ ಮಾಡಲಾಗಿ, ಕೋರಲಾದ ಪ್ರದೇಶವು ಹುಲಿ ಸಂರಕ್ಷಿತ ಪ್ರದೇಶಕ್ಕೆ ಒಳಪಟ್ಟಿರುವುದರಿಂದ, ಸದರಿ ಪ್ರದೇಶವನ್ನು ವಿಶ್ವಶಾಂತಿ ನಿಕೇತನ ಆಶ್ರಮಕ್ಕೆ ನೀಡಲು ಸಾಧ್ಯವಾಗುದಿಲ್ಲವಾದ್ದರಿಂದ, ಸದರಿ ಆಶ್ರಮದವರು ಅನ್ ಲೈನ್ ಮುಖಾಂತರ ಸಲ್ಲಿಸಿರುವ ಎಫ್.ಸಿ. ಪ್ರೊಪೋಸಲ್ ನಂ, FP/KA/Others/19387/2016 ನ್ನು ತಿರಸ್ಕರಿಸಿ, ವಿಭಾಗದ ಬಾಕಿ ಇರುವ ಪಟ್ಟಿಯಿಂದ ಕೈಬಿಡಲು ಶಿಫಾರಸ್ಸು ಮಾಡಲು ಸಂಬಂಧಿಸಿದ ದಾಖಲಾತಿಗಳು ಹಾಗೂ ಕ್ಷೇತ್ರ ತಪಾಸಣಾ ವರದಿಯನ್ನು ಅಡಕಗೊಳಿಸಿ ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ವರದಿಯನ್ನು ಪರಿಶೀಲಿಸಲಾಗಿ, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಬಿಳಿಗಿರಿರಂಗನ ಬೆಟ್ಟದಲ್ಲಿರುವ ವಿಶ್ವಶಾಂತಿ ನಿಕೇತನ ಆಶ್ರಮಕ್ಕೆ ಈ ಹಿಂದೆ ಸರ್ಕಾರದವರು ನೀಡಿದ್ದ ಒಂದು ಎಕರೆ ಅರಣ್ಯ ಪ್ರದೇಶವನ್ನು ಆಶ್ರಮದ ಹೆಸರಿಗೆ ಅಧಿಕೃತವಾಗಿ ವರ್ಗಾವಣೆ ಮಾಡಿಕೊಡುವ ಸಂಬಂಧ ಅನ್ ಲೈನ್ ಮುಖಾಂತರ ಸಲ್ಲಿಸಿರುವ

ಪ್ರಸ್ತಾವನೆಯಲ್ಲಿನ ಪ್ರದೇಶವು ಹುಲಿ ಸಂರಕ್ಷಿತ ಪ್ರದೇಶಕ್ಕೆ ಒಳಪಟ್ಟಿರುವುದರಿಂದ, ನಿಯಮಾನುಸಾರ ಸದರಿ ಪ್ರದೇಶವನ್ನು ಯಾವುದೇ ಚಟುವಟಿಕೆಗಳಿಗೆ ಬಳಸುವಂತಿಲ್ಲವೆಂದು ಆದೇಶವಿರುವುದರಿಂದ, ಸದರಿ ಆಶ್ರಮದವರು ಸಲ್ಲಿಸಿರುವ ಎಫ್.ಸಿ. ಪ್ರೊಪೋಸಲ್ ನಂ. FP/KA/Others/19387/2016 ನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕೋರಿಕೆಯಂತೆ ಅನ್ ಲೈನ್ ಪಟ್ಟಿಯಲ್ಲಿ ತಿರಸ್ಕರಿಸಬೇಕೆಂದು ಶಿಫಾರಸ್ಸು ಮಾಡುತ್ತಾ, ಉಲ್ಲೇಖದ ಪತ್ರದ ಪ್ರತಿ ಹಾಗೂ ಅಡಕ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಗೌರವಗಳೊಂದಿಗೆ,

ತಮ್ಮ ನಂಬುಗೆಯ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಪ್ರಾದೇಶಿಕ), ಚಾಮರಾಜನಗರ.

✓ ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ದಿನಾಂಕ 21/1/2021 ರಂದು ರವಾನಿಸಲಾಗಿದೆ

BRT TIGER RESERVE

Government of Karnataka
(Forest Department)

Sulthan Shariff Circle, Sathy Road
Chamarajanagar – 571313
☎ : Office : 08226-222059
Telefax : 08226-225165
E-mail : dirbrttr@gmail.com

**Office of the Deputy Conservator of Forests and Director, BRT Tiger Reserve, Chamarajanagar.**

No. DMN/BR Hills Vishwashanti Nikethana/2020-21 Date : 17.11.2020

On 22-10-2020 I have inspected the proposed diversion area (Vishwa Shanthinikethana Trust). The proposal is for diversion of 1 acres of forest land but the actual area including the approach road is 1.6 acres. The proposed area is near to Biligiri Rangana Temple which is a piligrimage centre. It is near to the main road connecting K.Gudi and Biligiri Ranganatha temple. Since the area is well within the tiger reserve wild animals like tiger, elephant, gaur, chital etc., and varieties of birds are found in this area. Signs of movement of wild animals like elephants were observed near the porposed area through indirect observations like dung. However, many of the concrete structures like welcome arch, gate with pillars, kuthir, guest room, temple, washroom complex, deer samadhi, residential rooms, swamiji samadhi, walking paths have developed over a period of last 25 years. Though leasing this area to the trust in no way helps in conservation of biodivesity of this tiger reserve, this area cannot be reverted back to its original status because of the above mentioned developments. Moreover, a lot of piligrims visit to the ashrama regularly during weekends. They are emotionally attached to this site. So, I recommend to accept this proposal for a larger public interest with the following conditions.

1. No new concrete structures to be built in the future.
2. Management of the ashrama should not be handedover to a new successor by simply nominating someone as the legal heir.
3. Payment of arrears of lease rent with interest.
4. Purchase and handover of double the area diverted along with the cost for compensatory afforestation.

17/11/20

Deputy Conservator of Forests and Director,
BRT Tiger Reserve, Chamarajanagar.